# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 78 |
| ಸದಸ್ಯರ ಹೆಸರು | : | ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 07/02/2019 |
| ಉತ್ತರಿಸಬೇಕಾದ ಸಚಿವರು | : | ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಡಯಟ್ ಕಾಲೇಜುಗಳೆಷ್ಟು; ಪ್ರತಿ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ಅ) ರಾಜ್ಯದಲ್ಲಿರುವ ಡಯಟ್ ಕಾಲೇಜುಗಳ ಸಂಖ್ಯೆ: 34. (ವಿವರವನ್ನು ಅನುಬಂಧ-1ರಲ್ಲಿ ಒದಗಿಸಿದೆ).<br>ಆ) ಡಯಟ್ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರುಗಳ ಸಂಖ್ಯೆ:386 (ವಿವರವನ್ನು ಅನುಬಂಧ-2ರಲ್ಲಿ ಒದಗಿಸಿದೆ). |
| ಆ) | ರಾಜ್ಯದ ಪ್ರತಿಯೊಂದು ಜಿಲ್ಲಾ ಡಯಟ್ ಕಾಲೇಜುಗಳಲ್ಲಿ ಅಭ್ಯಾಸಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದ 34 ಜಿಲ್ಲೆಗಳ ಪೈಕಿ 27 ಜಿಲ್ಲೆಗಳಲ್ಲಿ ಮಾತ್ರ ಸೇವಾ ಪೂರ್ವ ತರಬೇತಿ ಇರುತ್ತದೆ. ಈ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಗಳಲ್ಲಿ ಅಭ್ಯಾಸಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ:376. ಜಿಲ್ಲಾವಾರು ವಿದ್ಯಾರ್ಥಿಗಳ ವಿವರವನ್ನು (ಅನುಬಂಧ-3) ರಲ್ಲಿ ಒದಗಿಸಿದೆ. |
| ಇ) | ರಾಜ್ಯದ ಡಯಟ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗಿಂತ ಉಪನ್ಯಾಸಕರ ಸಂಖ್ಯೆ ಹೆಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಏನು ಕ್ರಮ ಜರುಗಿಸಲಾಗಿದೆ;(ವಿವರ ನೀಡುವುದು) | ಬಂದಿದೆ.<br>ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 30 ಕಂದಾಯ ಜಿಲ್ಲೆಯಲ್ಲಿನ ಡಯಟ್ ಕಾಲೇಜುಗಳಲ್ಲಿ ಕಡಿಮೆ ದಾಖಲಾತಿ ಹೊಂದಿರುವ ಕಾರಣ, 19 ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(ಡಯಟ್) ಗಳಲ್ಲಿರುವ ಸೇವಾ ಪೂರ್ವ ವಿಭಾಗಗಳನ್ನು ಮುಂದುವರೆಸಲು, 07 ಸರ್ಕಾರಿ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಮುಚ್ಚಲು ಹಾಗೂ 08 ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಲ್ಲಿನ ಸೇವಾ ಪೂರ್ವ ಶಿಕ್ಷಕ ಶಿಕ್ಷಣ ವಿಭಾಗಗಳನ್ನು ತಾತ್ಕಾಲಿಕವಾಗಿ ಮುಚ್ಚಲು ಸರ್ಕಾರದ ಆದೇಶ ಸಂಖ್ಯೆ:ಇಡಿ 06 ಎಂಪಿಇ 2017, ಬೆಂಗಳೂರು ದಿನಾಂಕ:22-09-2018ರ ಪ್ರಕಾರ ಆದೇಶಿಸಲಾಗಿರುತ್ತದೆ (ಆದೇಶ ಪ್ರತಿ **ಅನುಬಂಧ-4**ರಲ್ಲಿ ಒದಗಿಸಿದೆ) |

| | | |
|---|---|---|
| ಈ) | ರಾಜ್ಯದಲ್ಲಿರುವ ಪ್ರತಿಯೊಂದು ಡಯಟ್ ಕಾಲೇಜುಗಳಿಗೆ ಖರ್ಚು ಮಾಡುವ ಹಣವೆಷ್ಟು; (ಉಪನ್ಯಾಸಕರ ಸಂಬಳ, ವಿದ್ಯಾರ್ಥಿಗಳಿಗಾಗಿ, ಕಾಲೇಜು ನಿರ್ವಹಣೆಗಾಗಿ ಮತ್ತು ಬೋಧಕೇತರ ವರ್ಗದವರಿಗೆ ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು) | ಪಿ.ಎಸ್.ಟಿ.ಇ ವಿಭಾಗ ಹೊಂದಿರುವ ರಾಜ್ಯದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಗಳಿಗೆ ಈ ಕೆಳಕಂಡಂತೆ ಹಣವನ್ನು ಖರ್ಚು ಮಾಡಲಾಗುತ್ತಿದೆ.<br><br>ಕ್ರ.ಸಂ. \| ವರ್ಗ \| ಮೊತ್ತ<br>1. \| ಉಪನ್ಯಾಸಕರು \| 10,67,72,117<br>2. \| ಬೋಧಕೇತರ \| 1,90,38,779<br>ಒಟ್ಟು \| **12,58,10,896.**<br><br>(ಜಿಲ್ಲಾವಾರು ಸಂಪೂರ್ಣ ವಿವರ **ಅನುಬಂಧ-5** ರಲ್ಲಿ ಒದಗಿಸಿದೆ).<br>ವಿದ್ಯಾರ್ಥಿಗಳಿಗೆ ಮತ್ತು ಡಯಟ್ ನಿರ್ವಹಣೆಗಾಗಿ ಪ್ರತ್ಯೇಕವಾಗಿ ಯಾವುದೇ ಅನುದಾನ ಬಿಡುಗಡೆ ಮಾಡುತ್ತಿಲ್ಲ. |
| ಉ) | ಡಯಟ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರುಗಳು ಶಾಲಾ ಶಿಕ್ಷಕರುಗಳನ್ನು ನಿಯೋಜಿಸಿಕೊಂಡು ತರಬೇತಿ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಉಪನ್ಯಾಸಕರುಗಳ ಕರ್ತವ್ಯಗಳೇನು? (ವಿವರ ನೀಡುವುದು) | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಗಳಲ್ಲಿನ ತರಬೇತಿ ಕಾರ್ಯಗಳಿಗೆ ಶಿಕ್ಷಕರನ್ನು ನಿಯೋಜಿಸಿರುವುದಿಲ್ಲ.<br><br>ಡಯಟ್ ಕಾಲೇಜುಗಳಲ್ಲಿನ ಉಪನ್ಯಾಸಕರುಗಳ ಕರ್ತವ್ಯದ ವಿವರಗಳನ್ನು **ಅನುಬಂಧ-6**ರಲ್ಲಿ ಒದಗಿಸಿದೆ. |

**ಸಂಖ್ಯೆ : ಇಡಿ 16 ಪಿಟಿಐ 2019**

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

ಅನುಬಂಧ-1

| ಕ್ರ.ಸಂ | ಡಯಟ್‌ಗಳ ಹೆಸರು | |
|---|---|---|
| 1 | Bangalore Rural | ಕಂದಾಯ ಜಿಲ್ಲೆ |
| 2 | Bangalore Urban(S) | ಕಂದಾಯ ಜಿಲ್ಲೆ |
| 3 | Belgaum | ಕಂದಾಯ ಜಿಲ್ಲೆ |
| 4 | Bellary | ಕಂದಾಯ ಜಿಲ್ಲೆ |
| 5 | Bidar | ಕಂದಾಯ ಜಿಲ್ಲೆ |
| 6 | Bijapura | ಕಂದಾಯ ಜಿಲ್ಲೆ |
| 7 | Chamarajanagara | ಕಂದಾಯ ಜಿಲ್ಲೆ |
| 8 | Chikkaballapura | ಕಂದಾಯ ಜಿಲ್ಲೆ |
| 9 | Chikkamagalore | ಕಂದಾಯ ಜಿಲ್ಲೆ |
| 10 | Chitradurga | ಕಂದಾಯ ಜಿಲ್ಲೆ |
| 11 | Davanagere | ಕಂದಾಯ ಜಿಲ್ಲೆ |
| 12 | Dharawada | ಕಂದಾಯ ಜಿಲ್ಲೆ |
| 13 | Gadaga | ಕಂದಾಯ ಜಿಲ್ಲೆ |
| 14 | Hassan | ಕಂದಾಯ ಜಿಲ್ಲೆ |
| 15 | Haveri | ಕಂದಾಯ ಜಿಲ್ಲೆ |
| 16 | Ilkal | ಕಂದಾಯ ಜಿಲ್ಲೆ |
| 17 | Kamalapura | ಕಂದಾಯ ಜಿಲ್ಲೆ |
| 18 | Kolara | ಕಂದಾಯ ಜಿಲ್ಲೆ |
| 19 | Koppala | ಕಂದಾಯ ಜಿಲ್ಲೆ |
| 20 | Kudige | ಕಂದಾಯ ಜಿಲ್ಲೆ |
| 21 | Kumta | ಕಂದಾಯ ಜಿಲ್ಲೆ |
| 22 | Mandya | ಕಂದಾಯ ಜಿಲ್ಲೆ |
| 23 | Mangalore | ಕಂದಾಯ ಜಿಲ್ಲೆ |
| 24 | Mysore | ಕಂದಾಯ ಜಿಲ್ಲೆ |
| 25 | Ramanagara | ಕಂದಾಯ ಜಿಲ್ಲೆ |
| 26 | Shimoga | ಕಂದಾಯ ಜಿಲ್ಲೆ |
| 27 | Tumkur | ಕಂದಾಯ ಜಿಲ್ಲೆ |
| 28 | Udupi | ಕಂದಾಯ ಜಿಲ್ಲೆ |
| 29 | Yadagiri | ಕಂದಾಯ ಜಿಲ್ಲೆ |
| 30 | Yaramaras | ಕಂದಾಯ ಜಿಲ್ಲೆ |
| 31 | Bengaluru North | ಶೈಕ್ಷಣಿಕ ಜಿಲ್ಲೆ |
| 32 | Madhugiri | ಶೈಕ್ಷಣಿಕ ಜಿಲ್ಲೆ |
| 33 | Sirsi | ಶೈಕ್ಷಣಿಕ ಜಿಲ್ಲೆ |
| 34 | Chikkodi | ಶೈಕ್ಷಣಿಕ ಜಿಲ್ಲೆ |

ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ
ಬೆಂಗಳೂರು - 560 085

ಅನುಬಂಧ-2

| ಕ್ರ.ಸಂ | ಡಯಟ್‌ಗಳ ಹೆಸರು | ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರುಗಳ ಸಂಖ್ಯೆ |
|---|---|---|
| 1 | Bangalore Rural | 13 |
| 2 | Bangalore Urban(S) | 17 |
| 3 | Belgaum | 15 |
| 4 | Bellary | 13 |
| 5 | Bidar | 19 |
| 6 | Bijapura | 12 |
| 7 | Chamarajanagara | 6 |
| 8 | Chikkaballapura | 17 |
| 9 | Chikkamagalore | 15 |
| 10 | Chitradurga | 10 |
| 11 | Davanagere | 17 |
| 12 | Dharawada | 15 |
| 13 | Gadaga | 7 |
| 14 | Hassan | 14 |
| 15 | Haveri | 8 |
| 16 | Ilkal | 15 |
| 17 | Kamalapura | 19 |
| 18 | Kolara | 14 |
| 19 | Koppala | 11 |
| 20 | Kudige | 6 |
| 21 | Kumta | 13 |
| 22 | Mandya | 10 |
| 23 | Mangalore | 7 |
| 24 | Mysore | 18 |
| 25 | Ramanagara | 13 |
| 26 | Shimoga | 13 |
| 27 | Tumkur | 17 |
| 28 | Udupi | 7 |
| 29 | Yadagiri | 3 |
| 30 | Yaramaras | 5 |
| 31 | Bengaluru North | 4 |
| 32 | Madhugiri | 4 |
| 33 | Sirsi | 4 |
| 34 | Chikkodi | 5 |
| | Total : | 386 |

ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
100 ಅಡಿ ವರ್ತುಳ ರಸ್ತೆ, ಬನಶಂಕರಿ 3ನೇ ಹಂತ
ಬೆಂಗಳೂರು - 560 085

ಅನುಬಂಧ-3

| ಕ್ರ.ಸಂ | ಡಯಟ್‌ಗಳ ಹೆಸರು | ವಿದ್ಯಾರ್ಥಿಗಳ ಸಂಖ್ಯೆ | |
|---|---|---|---|
| 1 | Bangalore Rural | 4 | |
| 2 | Bangalore Urban(S) | 0 | |
| 3 | Belgaum | 0 | |
| 4 | Bellary | 67 | |
| 5 | Bidar | 42 | |
| 6 | Bijapura | 4 | |
| 7 | Chikkaballapura | 2 | |
| 8 | Chikkamagalore | 0 | |
| 9 | Chitradurga | 19 | |
| 10 | Davanagere | 4 | |
| 11 | Dharawada | 10 | |
| 12 | Hassan | 0 | |
| 13 | Ilkal | 0 | |
| 14 | Kamalapura | 6 | |
| 15 | Kolara | 1 | |
| 16 | Koppala | 28 | |
| 17 | Kudige | 36 | |
| 18 | Kumta | 4 | |
| 19 | Mandya | 15 | |
| 20 | Mangalore | 33 | |
| 21 | Mysore | 32 | |
| 22 | Ramanagara | 0 | |
| 23 | Shimoga | 10 | |
| 24 | Tumkur | 0 | |
| 25 | Udupi | 7 | |
| 26 | Yadagiri | 42 | kan-26, Urd-17 |
| 27 | Yaramaras | 10 | |
| | **Total** | 376 | |

ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ
ಬೆಂಗಳೂರು - 560 085.

ಅನುಬಂಧ-4

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ರಾಜ್ಯದ 8 ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಲ್ಲಿನ ಸೇವಾ ಪೂರ್ವ ತರಬೇತಿ ವಿಭಾಗಗಳನ್ನು ತಾತ್ಕಾಲಿಕವಾಗಿ, 7 ಸರ್ಕಾರಿ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಮುಚ್ಚುವ ಬಗ್ಗೆ.

ಪ್ರಸ್ತಾವನೆ:

1986ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಮಾಡಿದ್ದ ಶಿಫಾರಸ್ಸುಗಳಿಗೆ ಅನುಗುಣವಾಗಿ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲಾ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ (ಡಯಟ್) ಸಂಸ್ಥೆಗಳನ್ನು 1993ರಲ್ಲಿ 8 ಜಿಲ್ಲೆಗಳಲ್ಲಿ, 1995ರಲ್ಲಿ 12, 2006ರಲ್ಲಿ 7, 2009 ರಲ್ಲಿ 2, 2010 ರಲ್ಲಿ 01 ರಂತೆ ಒಟ್ಟು 30 ಕಂದಾಯ ಜಿಲ್ಲೆಗಳಲ್ಲಿ ಪೂರ್ಣ ಪ್ರಮಾಣದ 30 ಡಯಟ್‌ಗಳನ್ನು ಪ್ರಾರಂಭಿಸಲಾಗಿತ್ತು.

2015ರಲ್ಲಿ ಶೂನ್ಯ ದಾಖಲಾತಿ ಹೊಂದಿದ್ದ 04 ಸರ್ಕಾರಿ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಮುಚ್ಚಿ, ಈ ಸಂಸ್ಥೆಗಳಲ್ಲಿ ಮಂಜೂರಾಗಿದ್ದ ಹುದ್ದೆಗಳನ್ನು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು ಮಂಜೂರಾಗದೇ ಇರುವ 04 ಹೊಸ ಶೈಕ್ಷಣಿಕ ಜಿಲ್ಲೆಗಳಾದ ಚಿಕ್ಕೋಡಿ, ಶಿರಸಿ, ಮಧುಗಿರಿ ಮತ್ತು ಬೆಂಗಳೂರು ಉತ್ತರ ಜಿಲ್ಲೆಗಳಿಗೆ ಸ್ಥಳಾಂತರಿಸಿ, 04 ನೂತನ ಡಯಟ್‌ಗಳನ್ನು ಪ್ರಾರಂಭಿಸಲಾಗಿದೆ.

ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ (2017), ಭಾರತ ಸರ್ಕಾರ ಇವರ ವತಿಯಿಂದ ಡಯಟ್‌ಗಳಲ್ಲಿ ಸೇವಾಪೂರ್ವ ಶಿಕ್ಷಕ ಶಿಕ್ಷಣ ಮತ್ತು ಸೇವಾನಿರತ ಶಿಕ್ಷಕ ಶಿಕ್ಷಣಕ್ಕೆ ಪೂರಕವಾಗುವಂತೆ ನಿರ್ವಹಿಸಬೇಕಾದ ಶೈಕ್ಷಣಿಕ ಚಟುವಟಿಕೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ.

1. ಬಿ.ಆರ್.ಸಿ ಮತ್ತು ಸಿ.ಆರ್.ಸಿ ಗಳಲ್ಲಿ ನಡೆಯುವ ಶಿಕ್ಷಕರ ತರಬೇತಿಗಳ ಉಸ್ತುವಾರಿ ನಡೆಸುವುದು. ಶಿಕ್ಷಕರ ತರಬೇತಿಗಳಿಗೆ ಪ್ರಧಾನ ಸಂಪನ್ಮೂಲ ವ್ಯಕ್ತಿಗಳನ್ನು ಸಿದ್ಧಪಡಿಸುವುದು ಮತ್ತು ಮಾರ್ಗದರ್ಶನ ನೀಡುವುದು.
2. ಶೈಕಣಿಕ ನಾಯಕತ್ವ, ಶೈಕ್ಷಣಿಕ ಮೌಲ್ಯಮಾಪನ ಮತ್ತು ಮೌಲ್ಯಾಂಕನ, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ, ಸಂಯೋಜಿತ ಶಿಕ್ಷಣ, ಲಿಂಗ ಸಮಾನತೆ ಮುಂತಾದವುಗಳ ಬಗ್ಗೆ ವಿಶೇಷ ತರಬೇತಿಗಳನ್ನು ಆಯೋಜಿಸಿವುದು.
3. ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರಿಗೆ ತರಬೇತಿಗಳನ್ನು ಆಯೋಜಿಸಿವುದು.
4. ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಶಿಕ್ಷಕರಿಗೆ ತರಬೇತಿಗಳನ್ನು ಆಯೋಜಿಸಿವುದು.
5. ಬಿ.ಆರ್.ಸಿ ಮತ್ತು ಸಿ.ಆರ್.ಸಿ ಗಳಲ್ಲಿ ನಡೆಯುವ ಶಿಕ್ಷಕರ ತರಬೇತಿಗಳಿಗೆ ಶೈಕ್ಷಣಿಕ ಸಂಪನ್ಮೂಲಗಳನ್ನು ಒದಗಿಸುವುದು. (ಇ-ಪಾಠಶಾಲಾ ಮತ್ತು ಸ್ವಯಂ ನಂತಹ ಆನ್‌ಲೈನ್‌ನಲ್ಲಿ ವೇದಿಕೆಗಳಲ್ಲಿ ದೊರೆಯುವ ಇ- ಸಂಪನ್ಮೂಲಗಳನ್ನು ಬಳಸುವುದು)
6. ಶಾಲೆಗಳಲ್ಲಿ ನಾವೀನ್ಯ ಚಟುವಟಿಕೆಗಳನ್ನು ಮತ್ತು ಕ್ರಿಯಾ ಸಂಶೋಧನೆಗಳನ್ನು ಕೈಗೊಳ್ಳಲು ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು.
7. ಜಿಲ್ಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ಆಯೋಜಿಸುತ್ತಿರುವ ಸರ್ಕಾರೇತರ ಸಂಸ್ಥೆಗಳು ಮತ್ತು ಬಿ.ಆರ್.ಸಿ ಮತ್ತು ಸಿ.ಆರ್.ಸಿಗಳ ನಡುವೆ ಸಮನ್ವಯತೆ ಸಾಧಿಸುವುದು.
8. ಶಾಲಾ ಶೈಕ್ಷಣಿಕ ಯೋಜನೆಯನ್ನು ಶಾಲಾ ಹಂತದಲ್ಲಿ ಸಿದ್ಧಪಡಿಸಲು ಬಿ.ಆರ್.ಸಿ ಮತ್ತು ಸಿ.ಆರ್.ಸಿಗಳಿಗೆ ಮಾರ್ಗದರ್ಶನ ನೀಡುವುದು.
9. ಬಿ.ಆರ್.ಸಿ ಮತ್ತು ಸಿ.ಆರ್.ಸಿಗಳ ಮೇಲುಸ್ತುವಾರಿ ನಡೆಸುವುದು.
10. ಸೇವಾ ಪೂರ್ವ ಶಿಕ್ಷಕ ಶಿಕ್ಷಣ (ಪಿ.ಎಸ್.ಟಿ.ಇ) ಅಡಿಯಲ್ಲಿ ಡಿ ಎಲ್ ಇಡಿ ಕೋರ್ಸ್ ಅನ್ನು ನಡೆಸುವುದು.

..2

ರಾಜ್ಯದಲ್ಲಿ ಪ್ರಸ್ತುತ 7 ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಗಳು ಮತ್ತು 23 ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಲ್ಲಿ ಸೇವಾ ಪೂರ್ವ ಶಿಕ್ಷಕ ಶಿಕ್ಷಣವನ್ನು ನೀಡಲಾಗುತ್ತಿದೆ. ಅಲ್ಲದೇ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 36 ಅನುದಾನಿತ ಶಿಕ್ಷಕ ತರಬೇತಿ ಕೇಂದ್ರಗಳೂ ಸಹ ಕಾರ್ಯ ನಿರ್ವಹಿಸುತ್ತಿವೆ. ಸದರಿ ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಸೇವಾ ಪೂರ್ವ ಶಿಕ್ಷಕ ಶಿಕ್ಷಣ ಪಡೆಯಲಿಚ್ಛಿಸುವ ಅಭ್ಯರ್ಥಿಗಳ ಸಂಖ್ಯೆಯಲ್ಲಿ ಗಣನೀಯ ಇಳಿಕೆ ಆಗಿರುತ್ತದೆ. ಕೆಲವು ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ಮತ್ತು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಲ್ಲಿ ಕಡಿಮೆ ಮತ್ತು ಶೂನ್ಯ ದಾಖಲಾತಿ ಇರುತ್ತದೆ.

ರಾಜ್ಯದಲ್ಲಿರುವ ಏಳು ಸರ್ಕಾರಿ ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ 96 ಬೋಧಕ ಮತ್ತು 57 ಬೋಧಕೇತರ ಹುದ್ದೆಗಳು ಸೇರಿ ಒಟ್ಟು 153 ಹುದ್ದೆಗಳು ಮಂಜೂರಾಗಿರುತ್ತವೆ.

ಸರ್ಕಾರಿ ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಮತ್ತು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಲ್ಲಿನ ಸಿಬ್ಬಂದಿಗೆ ಪಾವತಿಸುತ್ತಿರುವ ವೇತನ ಅಂದಾಜು ವಾರ್ಷಿಕ ರೂ.1551 ಲಕ್ಷಗಳಷ್ಟಾಗುತ್ತದೆ. ಸದರಿ ಸಂಸ್ಥೆಗಳಲ್ಲಿ ಪ್ರಸ್ತುತ ಇರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ವಾರ್ಷಿಕ ಪ್ರತಿ ವಿದ್ಯಾರ್ಥಿಗೆ ರೂ.5.68 ಲಕ್ಷಗಳ ವೆಚ್ಚವಾಗುತ್ತಿದೆ. ಇಷ್ಟು ಹೆಚ್ಚಿನ ಪ್ರಮಾಣದಲ್ಲಿ ವೆಚ್ಚವಾಗುತ್ತಿರುವುದಕ್ಕೆ ಮಹಾಲೇಖಪಾಲರು 2015 ಮತ್ತು 2016 ರಲ್ಲಿ ಆಕ್ಷೇಪಣೆ ಮಾಡಿರುತ್ತಾರೆ.

ಸದರಿ ಸರ್ಕಾರಿ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ತಾತ್ಕಾಲಿಕವಾಗಿ ಮುಚ್ಚಲು ಪ್ರಸ್ತಾಪಿಸಲಾಗಿದೆ. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯು ಸೇವಾ ಪೂರ್ವ ಶಿಕ್ಷಕ ಶಿಕ್ಷಣ ಮತ್ತು ಸೇವಾ ನಿರತ ಶಿಕ್ಷಕ ಶಿಕ್ಷಣ ಕಾರ್ಯಗಳನ್ನು ನಿರ್ವಹಿಸುತ್ತಿದ್ದು ಈ ಸಂಸ್ಥೆಗಳಿಗೆ ಮಂಜೂರಾಗಿರುವ ಈ ಹುದ್ದೆಗಳ ಅಗತ್ಯತೆ ಇರುತ್ತದೆ.

ರಾಜ್ಯದಲ್ಲಿ ಪ್ರಸ್ತುತ 7 ಸರ್ಕಾರಿ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ತತ್ಕಾಲಿಕವಾಗಿ ಮುಚ್ಚಲು ಪ್ರಸ್ತಾಪಿಸಿದೆ ಮತ್ತು 23 ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಲ್ಲಿನ ಸೇವಾ ಪೂರ್ವ ವಿಭಾಗಗಳ ಪೈಕಿ ಹೈದರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳ ಮತ್ತು ಮೈಸೂರಿನಲ್ಲಿರುವ ಈ ಕೆಳಗಿನವುಗಳನ್ನು ಮಾತ್ರ ಮುಂದುವರೆಸಲು ಪ್ರಸ್ತಾಪಿಸಿದೆ.

| ಕ್ರಸಂ | ಜಿಲ್ಲೆ | ಸಂಸ್ಥೆಯ ಹೆಸರು | ಷರಾ |
|---|---|---|---|
| 1 | ಬೀದರ್ | ಡಯಟ್ | ಈಗಾಗಲೇ ಅನುಮೋದನೆ ದೊರೆತಿರುತ್ತದೆ |
| 2 | ರಾಯಚೂರು | ಡಯಟ್–ಮರಮರಸ್ | |
| 3 | ಯಾದಗಿರಿ | ಡಯಟ್ | |
| 4 | ಕೊಪ್ಪಳ | ಡಯಟ್ | |
| 5 | ಬಳ್ಳಾರಿ | ಡಯಟ್ | |
| 6 | ಕಲಬುರಗಿ | ಸ.ಶಿ.ತ.ಸಂಸ್ಥೆ.(ಮಹಿಳೆ)/ ಡಯಟ್ | |
| 7 | ಮೈಸೂರು | ಡಯಟ್ | |

| | | | |
|---|---|---|---|
| 8 | ಕೊಡಗು | ಡಯಟ್-ಕೊಡಿಗೆ | ಈ ಜಿಲ್ಲೆಯಲ್ಲಿ ಯಾವುದೇ ಅನುದಾನಿತ ಶಿಕ್ಷಕರ ತರಬೇತಿ ಸಂಸ್ಥೆ ಇರುವುದಿಲ್ಲ |
| 9 | ಚಿಕ್ಕಮಗಳೂರು | ಡಯಟ್ | ಈ ಜಿಲ್ಲೆಯಲ್ಲಿ ಯಾವುದೇ ಅನುದಾನಿತ ಶಿಕ್ಷಕರ ತರಬೇತಿ ಸಂಸ್ಥೆ ಇರುವುದಿಲ್ಲ |
| 10 | ಹಾಸನ | ಡಯಟ್ | ಈ ಜಿಲ್ಲೆಯಲ್ಲಿ ಯಾವುದೇ ಅನುದಾನಿತ ಶಿಕ್ಷಕರ ತರಬೇತಿ ಸಂಸ್ಥೆ ಇರುವುದಿಲ್ಲ |
| 11 | ಚಿಕ್ಕಬಳ್ಳಾಪುರ | ಡಯಟ್ | ಈ ಜಿಲ್ಲೆಯಲ್ಲಿ ಯಾವುದೇ ಅನುದಾನಿತ ಶಿಕ್ಷಕರ ತರಬೇತಿ ಸಂಸ್ಥೆ ಇರುವುದಿಲ್ಲ |
| 12 | ಶಿವಮೊಗ್ಗ | ಡಯಟ್ | ಈ ಜಿಲ್ಲೆಯಲ್ಲಿ ಯಾವುದೇ ಅನುದಾನಿತ ಶಿಕ್ಷಕರ ತರಬೇತಿ ಸಂಸ್ಥೆ ಇರುವುದಿಲ್ಲ |
| 13 | ದಾವಣಗೆರೆ | ಡಯಟ್ | ಜಿಲ್ಲಾ ಕೇಂದ್ರದಲ್ಲಿ ಅನುದಾನಿತ ಶಿಕ್ಷಕರ ತರಬೇತಿ ಸಂಸ್ಥೆ ಇರುವುದಿಲ್ಲ (ಹರಪನಹಳ್ಳಿಯಲ್ಲಿದೆ) |
| 14 | ಕೋಲಾರ | ಡಯಟ್ | ಜಿಲ್ಲಾ ಕೇಂದ್ರದಲ್ಲಿ ಉರ್ದು ಅನುದಾನಿತ ಶಿಕ್ಷಕರ ತರಬೇತಿ ಸಂಸ್ಥೆ ಇರುತ್ತದೆ ಕನ್ನಡ ಸಂಸ್ಥೆ ಇರುವುದಿಲ್ಲ |
| 15 | ರಾಮನಗರ | ಡಯಟ್ | ಈ ಜಿಲ್ಲೆಯಲ್ಲಿ ಯಾವುದೇ ಅನುದಾನಿತ ಶಿಕ್ಷಕರ ತರಬೇತಿ ಸಂಸ್ಥೆ ಇರುವುದಿಲ್ಲ |
| 16 | ವಿಜಯಪುರ | ಡಯಟ್ | ಜಿಲ್ಲಾ ಕೇಂದ್ರದಲ್ಲಿ ಅನುದಾನಿತ ಶಿಕ್ಷಕರ ತರಬೇತಿ ಸಂಸ್ಥೆ ಇರುವುದಿಲ್ಲ(ಇಂಡಿ ತಾಲೂಕಿನ ಇಚಿಡಿ(ಉರ್ದು) ಮತ್ತು ಲಚ್ಯಾಣದಲ್ಲಿರುತ್ತವೆ) |
| 17 | ಉತ್ತರ ಕನ್ನಡ | ಡಯಟ್ | ಜಿಲ್ಲಾ ಕೇಂದ್ರದಲ್ಲಿ ಅನುದಾನಿತ ಶಿಕ್ಷಕರ ತರಬೇತಿ ಸಂಸ್ಥೆ ಇರುವುದಿಲ್ಲ (ಅಂಕೋಲದಲ್ಲಿದೆ) |
| 18 | ಚಿತ್ರದುರ್ಗ | ಡಯಟ್ | ಜಿಲ್ಲಾ ಕೇಂದ್ರದಲ್ಲಿ ಅನುದಾನಿತ ಶಿಕ್ಷಕರ ತರಬೇತಿ ಸಂಸ್ಥೆ ಇರುವುದಿಲ್ಲ (ಚಳ್ಳಕೆರೆಯಲ್ಲಿದೆ) |
| 19 | ಉಡುಪಿ | ಡಯಟ್ | ಜಿಲ್ಲಾ ಕೇಂದ್ರದಲ್ಲಿ ಅನುದಾನಿತ ಶಿಕ್ಷಕರ ತರಬೇತಿ ಸಂಸ್ಥೆ ಇರುವುದಿಲ್ಲ (ಕೊಕ್ಕರ್ಣೆ ಎನ್ನುವ ಹಳ್ಳಿಯಲ್ಲಿದೆ) |

ಮೇಲೆ ಹೆಸರಿಸಿರುವ ಜಿಲ್ಲೆಗಳಲ್ಲಿ ಅನುದಾನಿತ ಡಿ.ಎಲ್.ಇಡಿ. ಕಾಲೇಜುಗಳು ಇರುವುದಿಲ್ಲ. ಕೆಲವು ಜಿಲ್ಲೆಗಳಲ್ಲಿ ಜಿಲ್ಲಾ ಕೇಂದ್ರದಿಂದ ದೂರ ಇರುತ್ತವೆ ಆದುದರಿಂದ ಈ ಡಯಟ್‌ಗಳಲ್ಲಿ ಸೇವಾಪೂರ್ವ ಶಿಕ್ಷಕ ಶಿಕ್ಷಣ ವಿಭಾಗವನ್ನು ಮುಂದುವರಿಸಲು ಉದ್ದೇಶಿಸಿದೆ.

ಈ ಕೆಳಗಿನ 07 ಸರ್ಕಾರಿ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ತಾತ್ಕಾಲಿಕವಾಗಿ ಮುಚ್ಚಲು ಪ್ರಸ್ತಾಪಿಸಿದೆ.

| ಕ್ರಸಂ | ಜಿಲ್ಲೆ | ಸಂಸ್ಥೆಯ ಹೆಸರು | ಸಿಬ್ಬಂದಿ ಸಂಖ್ಯೆ |
|---|---|---|---|
| 1 | ಕಲಬುರಗಿ | ಸ.ಶಿ.ತ.ಸಂಸ್ಥೆ ಮಹಿಳಾ (ಕಲಬುರಗಿ) | 34 |
| 2 | ಕಲಬುರಗಿ | ಸ.ಶಿ.ತ.ಸಂಸ್ಥೆ ಗಂಡು (ಕಲಬುರಗಿ) | 17 |
| 3 | ಚಿತ್ರದುರ್ಗ | ಸ.ಶಿ.ತ.ಸಂಸ್ಥೆ ಹೊಸದುರ್ಗ | 17 |
| 4 | ಧಾರವಾಡ | ಸ.ಶಿ.ತ.ಸಂಸ್ಥೆ ಮಹಿಳಾ ಧಾರವಾಡ | 27 |
| 5 | ಮೈಸೂರು | ಸ.ಶಿ.ತ.ಸಂಸ್ಥೆ, ಮಹಾರಾಣಿ ಮೈಸೂರು. | 26 |
| 6 | ರಾಯಚೂರು | ಸ.ಶಿ.ತ.ಸಂಸ್ಥೆ, ಸಿಂಧನೂರು | 12 |
| 7 | ತುಮಕೂರು | ಸ.ಶಿ.ತ.ಸಂಸ್ಥೆ, ಚಿಕ್ಕನಹಳ್ಳಿ, ಶಿರಾ ತಾಲ್ಲೂಕು | 20 |
| | | ಒಟ್ಟು | 153 |

ಈ ಕೆಳ ಕಾಣಿಸಿದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ (ಡಯಟ್) ಸಂಸ್ಥೆಗಳಲ್ಲಿನ ಸೇವಾ ಪೂರ್ವ ವಿಭಾಗಗಳನ್ನು ತಾತ್ಕಾಲಿಕವಾಗಿ ಮುಚ್ಚಲು ಪ್ರಸ್ತಾಪಿಸಿದೆ.

| ಕ್ರಸಂ | ಜಿಲ್ಲೆ | ಸಂಸ್ಥೆಯ ಹೆಸರು | ಸ್ಪಷ್ಟೀಕರಣ |
|---|---|---|---|
| 1 | ದಕ್ಷಿಣ ಕನ್ನಡ | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಂಗಳೂರು. | ಮಂಗಳೂರು ನಗರದಲ್ಲಿ ಎರಡು ಅನುದಾನಿತ ಡಿ.ಎಲ್.ಇಡಿ ಕಾಲೇಜುಗಳು ಇರುತ್ತವೆ. ಆಸಕ್ತರಿಗೆ ಅನುದಾನಿತ ಸಂಸ್ಥೆಗಳು ಜಿಲ್ಲಾ ಕೇಂದ್ರದಲ್ಲೇ ಲಭ್ಯವಾಗುವುದರಿಂದ. ಡಿ.ಎಲ್.ಇಡಿ ವ್ಯಾಸಂಗ ಮಾಡಲು ಅಪೇಕ್ಷಿಸುವ ಪ್ರಶಿಕ್ಷಣಾರ್ಥಿಗಳಿಗೆ ಯಾವುದೇ ಅಡಚಣೆಯಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಡಯಟ್‌ನಲ್ಲಿರುವ ಪಿ.ಎಸ್.ಟಿ.ಇ ವಿಭಾಗವನ್ನು ಮುಂದುವರಿಸುವ ಅಗತ್ಯತೆ ಕಂಡುಬರುವುದಿಲ್ಲ. |
| 2 | ಬೆಳಗಾವಿ | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಮಣ್ಣೂರು, ಬೆಳಗಾವಿ | ಬೆಳಗಾವಿ ನಗರದಲ್ಲಿ ಒಟ್ಟು ಐದು ಅನುದಾನಿತ ಡಿ.ಎಲ್.ಇಡಿ ಸಂಸ್ಥೆಗಳು ಚಾಲನೆಯಲ್ಲಿರುತ್ತವೆ. ಈ ಡಯಟ್‌ನಲ್ಲಿನ ಡಿ.ಎಲ್.ಇಡಿ ಕೋರ್ಸ್‌ಗೆ ದಾಖಲಾತಿ ಶೂನ್ಯ ಇರುತ್ತದೆ. ಶಿಕ್ಷಕರಾಗ ಬಯಸುವ ಆಸಕ್ತರಿಗೆ ಅನುದಾನಿತ ಸಂಸ್ಥೆಗಳು ಲಭ್ಯವಿರುತ್ತದೆ. ಆಸಕ್ತರಿಗೆ ಅಡಚಣೆಯಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಡಯಟ್‌ನಲ್ಲಿರುವ ಪಿ.ಎಸ್.ಟಿ.ಇ ವಿಭಾಗವನ್ನು ಮುಂದುವರಿಸುವ ಅಗತ್ಯತೆ ಕಂಡುಬರುವುದಿಲ್ಲ. |
| 3 | ಮಂಡ್ಯ | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಂಡ್ಯ | ಮಂಡ್ಯ ನಗರದಲ್ಲಿ ಸಂಟ್ ಜೋಸೆಫ್ ಅನುದಾನಿತ ಡಿ.ಎಲ್.ಇಡಿ ಕಾಲೇಜು ಡಯಟ್ ಮುಂಭಾಗಲ್ಲಿದ್ದು, ಈ ಡಯಟ್‌ನಲ್ಲಿನ ಡಿ.ಎಲ್.ಇಡಿ ಕೋರ್ಸ್‌ಗೆ ದಾಖಲಾತಿ ಶೂನ್ಯ ಇರುತ್ತದೆ. ಶಿಕ್ಷಕರಾಗ ಬಯಸುವ ಆಸಕ್ತರಿಗೆ ಅನುದಾನಿತ ಸಂಸ್ಥೆಗಳು ಲಭ್ಯವಿರುತ್ತದೆ. ಆಸಕ್ತರಿಗೆ ಅಡಚಣೆಯಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಡಯಟ್‌ನಲ್ಲಿರುವ ಪಿ.ಎಸ್.ಟಿ.ಇ ವಿಭಾಗವನ್ನು ಮುಂದುವರಿಸುವ ಅಗತ್ಯತೆ ಕಂಡುಬರುವುದಿಲ್ಲ. |
| 4 | ಧಾರವಾಡ | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ದಾರವಾಡ | ಧಾರವಾಡ ಜಿಲ್ಲೆಯಲ್ಲಿ ನಾಲ್ಕು ಅನುದಾನಿತ ಶಿಕ್ಷಕ ಶಿಕ್ಷಣ ತರಬೇತಿ ಸಂಸ್ಥೆ ಇರುತ್ತವೆ. ಆದುದರಿಂದ ಆಸಕ್ತರಿಗೆ ಜಿಲ್ಲಾ ಕೇಂದ್ರ ಮತ್ತು ಹುಬ್ಬಳ್ಳಿಗಳಲ್ಲಿರುವ ಅನುದಾನಿತ ಕಾಲ;ವಿಜುಗಳಲ್ಲಿ ಅವಕಾಶ ಲಭಿಸುವುದರಿಂದ ಡಯಟ್‌ನಲ್ಲಿನ ಪಿ.ಎಸ್.ಟಿ.ಇ ವಿಭಾಗವನ್ನು ಮುಂದುವರಿಸುವ ಅಗತ್ಯತೆ ಇರುವುದಿಲ್ಲ. |
| 5 | ಬೆಂಗಳೂರು ನಗರ | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಆರ್.ಆರ್ ನಗರ, ಬೆಂಗಳೂರು. | ಬೆಂಗಳೂರು ನಗರದಲ್ಲಿ ಒಟ್ಟು ಆರು ಅನುದಾನಿತ ಡಿ.ಎಲ್.ಇಡಿ ಸಂಸ್ಥೆಗಳು ಚಾಲನೆಯಲ್ಲಿರುತ್ತವೆ. ಬೆಂಗಳೂರು ನಗರದಲ್ಲಿರುವ ಎಲ್ಲಾ ಡಯಟ್ ಒಳಗೊಂಡಂತೆ, ಪ್ರಶಿಕ್ಷಣಾರ್ಥಿಗಳ ದಾಖಲಾತಿ ಸಂಖ್ಯೆ ಕಡಿಮೆ ಇರುವುದರಿಂದ, ಡಯಟ್‌ನಲ್ಲಿ ಪಿ.ಎಸ್.ಟಿ.ಇ ವಿಭಾಗವನ್ನು ಮುಂದುವರಿಸುವ ಅಗತ್ಯತೆ ಇರುವುದಿಲ್ಲ. ನಗರ ಮತ್ತು ಬೆಂಗಳೂರುಗ್ರಾಮಾಂತರ ಪ್ರದೇಶದಲ್ಲಿ ಶಿಕ್ಷಕರಾಗುವ ಆಸಕ್ತರಿಗೆ ಅನುದಾನಿತ ಸಂಸ್ಥೆಗಳು ಬೆಂಗಳೂರು ನಗರದಲ್ಲೇ ಲಭ್ಯವಾಗುವುದರಿಂದ, ಡಿ.ಎಲ್.ಇಡಿ ವ್ಯಾಸಂಗ ಮಾಡಲು ಅಪೇಕ್ಷಿಸುವ ಪ್ರಶಿಕ್ಷಣಾರ್ಥಿಗಳಿಗೆ ಯಾವುದೇ ಅಡಚಣೆಯಾಗುವುದಿಲ್ಲ. |
| 6 | ಬೆಂಗಳೂರು ಗ್ರಾಮಾಂತರ | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ರಾಜಾಜಿನಗರ, ಬೆಂಗಳೂರು | |

| ಕ್ರಸಂ | ಜಿಲ್ಲೆ | ಸಂಸ್ಥೆಯ ಹೆಸರು | ಸ್ಪಷ್ಟೀಕರಣ |
|---|---|---|---|
| 7 | ತುಮಕೂರು | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ತುಮಕೂರು | ತುಮಕೂರು ನಗರದಲ್ಲಿ ಎರಡು ಅನುದಾನಿತ ಡಿ.ಎಲ್.ಇಡಿ ಸಂಸ್ಥೆಗಳಿರುತ್ತವೆ. ಶಿಕ್ಷಕರಾಗುವ ಆಸಕ್ತರಿಗೆ ಅನುದಾನಿತ ಸಂಸ್ಥೆಗಳು ಲಭ್ಯವಿರುತ್ತದೆ. ಆದುದರಿಂದ, ಡಯಟ್‌ನಲ್ಲಿರುವ ಪಿ.ಎಸ್.ಟಿ.ಇ ವಿಭಾಗವನ್ನು ಮುಂದುವರಿಸುವ ಅಗತ್ಯತೆ ಇರುವುದಿಲ್ಲ. |
| 8 | ಬಾಗಲಕೋಟೆ | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಇಳಕಲ್. | ಬಾಗಲಕೋಟೆ ಜಿಲ್ಲಾ ಕೇಂದ್ರದಲ್ಲಿ ಬಸವೇಶ್ವರ ಶಿಕ್ಷಕರ ತರಬೇತಿ ಸಂಸ್ಥೆ ಇರುತ್ತದೆ. ಇಳಕಲ್ ಪಟ್ಟಣವು ಜಿಲ್ಲಾ ಕೇಂದ್ರದಿಂದ 65 ಕಿಮೀ ದೂರದಲ್ಲಿ ಇದ್ದು ದಾಖಲಾತಿ 2017-18ನೇ ಸಾಲಿನಲ್ಲಿ ದಾಖಲಾತಿ ಶೂನ್ಯ ಇರುತ್ತದೆ. ಆದುದರಿಂದ ಆಸಕ್ತರಿಗೆ ಜಿಲ್ಲಾ ಕೇಂದ್ರದಲ್ಲಿ ಅವಕಾಶ ಲಭಿಸುವುದರಿಂದ ಆದುದರಿಂದ ಡಯಟ್‌ನಲ್ಲಿನ ಪಿ.ಎಸ್.ಟಿ.ಇ ವಿಭಾಗವನ್ನು ಮುಂದುವರಿಸುವ ಅಗತ್ಯತೆ ಇರುವುದಿಲ್ಲ. |

ರಾಜ್ಯದಲ್ಲಿ ಒಟ್ಟು 30 ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು ಮತ್ತು ಏಳು ಸರ್ಕಾರಿ ಶಿಕ್ಷಕ ಶಿಕ್ಷಣ ತರಬೇತಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಕಡಿಮೆ ದಾಖಲಾತಿ ಹೊಂದಿರುವ ಕೆಲವು ಸರ್ಕಾರಿ ಶಿಕ್ಷಕ ಶಿಕ್ಷಣ ತರಬೇತಿ ಸಂಸ್ಥೆ (ಜಿ.ಟಿ.ಟಿ.ಐ) ಗಳು ಮತ್ತು ಕೆಲವು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಗಳಲ್ಲಿ ಸೇವಾ ಪೂರ್ವ ಶಿಕ್ಷಕ ತರಬೇತಿ ವಿಭಾಗದ ಮೂಲಕ ನೀಡುವ ಡಿ.ಎಲ್.ಇಡಿ. ಕೋರ್ಸ್ ಅನ್ನು ತಾತ್ಕಾಲಿಕವಾಗಿ ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಏಳು ಜಿ.ಟಿ.ಟಿ.ಐ ಗಳನ್ನು ಮುಚ್ಚಲು ಮತ್ತು 11 ಡಯಟ್‌ಗಳ ಪಿ.ಎಸ್.ಟಿ.ಇ. ವಿಭಾಗಗಳ ಪೈಕಿ, 3 ಡಯಟ್‌ಗಳಿಗೆ ಮಂಜೂರಾಗಿಲ್ಲದ ಪಿ.ಎಸ್.ಟಿ.ಇ ವಿಭಾಗಗಳನ್ನು ಹೊರತುಪಡಿಸಿ, ಉಳಿದ 8 ಡಯಟ್‌ಗಳಲ್ಲಿನ ಪಿ.ಎಸ್.ಟಿ.ಇ ವಿಭಾಗವನ್ನು ತಾತ್ಕಾಲಿಕವಾಗಿ ಮುಚ್ಚಬೇಕಾಗಿರುತ್ತದೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಇಡಿ 06 ಎಂಪಿಇ 2017, ಬೆಂಗಳೂರು, ದಿನಾಂಕ:22.09.2018

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 30 ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಲ್ಲಿ 19 ಡಯಟ್‌ಗಳಲ್ಲಿರುವ ಸೇವಾ ಪೂರ್ವ ವಿಭಾಗಗಳನ್ನು ಮುಂದುವರೆಸಲು, ಏಳು ಸರ್ಕಾರಿ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಮುಚ್ಚಲು ಹಾಗೂ ಎಂಟು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಲ್ಲಿನ ಸೇವಾ ಪೂರ್ವ ಶಿಕ್ಷಕ ಶಿಕ್ಷಣ ವಿಭಾಗಗಳನ್ನು ತಾತ್ಕಾಲಿಕವಾಗಿ ಮುಚ್ಚಲು ಈ ಕೆಳಕಂಡಂತೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಅ) ಈ ಕೆಳಕಂಡ 19 ಸೇವಾ ಪೂರ್ವ ವಿಭಾಗಗಳನ್ನು ಮುಂದುವರೆಸಲು.

| ಕ್ರಸಂ | ಜಿಲ್ಲೆ | ಸಂಸ್ಥೆಯ ಹೆಸರು |
|---|---|---|
| 1 | ಬೀದರ್ | ಡಯಟ್ |
| 2 | ರಾಯಚೂರು | ಡಯಟ್-ಯರಮರಸ್ |
| 3 | ಯಾದಗಿರಿ | ಡಯಟ್ |
| 4 | ಕೊಪ್ಪಳ | ಡಯಟ್ |

| | | |
|---|---|---|
| 5 | ಬಳ್ಳಾರಿ | ಡಯಟ್ |
| 6 | ಕಲಬುರಗಿ | ಸ.ಶಿ.ತ.ಸಂಸ್ಥೆ.(ಮಹಿಳೆ)/ ಡಯಟ್ |
| 7 | ಮೈಸೂರು | ಡಯಟ್ |
| 8 | ಕೊಡಗು | ಡಯಟ್– ಕೂಡಿಗೆ |
| 9 | ಚಿಕ್ಕಮಗಳೂರು | ಡಯಟ್ |
| 10 | ಹಾಸನ | ಡಯಟ್ |
| 11 | ಚಿಕ್ಕಬಳ್ಳಾಪುರ | ಡಯಟ್ |
| 12 | ಶಿವಮೊಗ್ಗ | ಡಯಟ್ |
| 13 | ದಾವಣಗೆರೆ | ಡಯಟ್ |
| 14 | ಕೋಲಾರ | ಡಯಟ್ |
| 15 | ರಾಮನಗರ | ಡಯಟ್ |
| 16 | ವಿಜಯಪುರ | ಡಯಟ್ |
| 17 | ಉತ್ತರ ಕನ್ನಡ | ಡಯಟ್ |
| 18 | ಚಿತ್ರದುರ್ಗ | ಡಯಟ್ |
| 19 | ಉಡುಪಿ | ಡಯಟ್ |

ಆ) ಈ ಕೆಳಕಂಡ 7 ಸರ್ಕಾರಿ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಮುಚ್ಚಲು.

| ಕ್ರ.ಸಂ | ಜಿಲ್ಲೆ | ಸಂಸ್ಥೆಯ ಹೆಸರು |
|---|---|---|
| 1 | ಕಲಬುರಗಿ | ಸ.ಶಿ.ತ.ಸಂಸ್ಥೆ ಮಹಿಳಾ (ಕಲಬುರಗಿ) |
| 2 | ಕಲಬುರಗಿ | ಸ.ಶಿ.ತ.ಸಂಸ್ಥೆ ಗಂಡು (ಕಲಬುರಗಿ) |
| 3 | ಚಿತ್ರದುರ್ಗ | ಸ.ಶಿ.ತ.ಸಂಸ್ಥೆ ಹೊಸದುರ್ಗ |
| 4 | ಧಾರವಾಡ | ಸ.ಶಿ.ತ.ಸಂಸ್ಥೆ ಮಹಿಳಾ ಧಾರವಾಡ |
| 5 | ಮೈಸೂರು | ಸ.ಶಿ.ತ.ಸಂಸ್ಥೆ, ಮಹಾರಾಣಿ ಮೈಸೂರು. |
| 6 | ರಾಯಚೂರು | ಸ.ಶಿ.ತ.ಸಂಸ್ಥೆ, ಸಿಂಧನೂರು |
| 7 | ತುಮಕೂರು | ಸ.ಶಿ.ತ.ಸಂಸ್ಥೆ, ಚಿಕ್ಕನಹಳ್ಳಿ, ಶಿರಾ ತಾಲ್ಲೂಕು |

ಇ) ಈ ಕೆಳಕಂಡ 8 ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಲ್ಲಿನ ಸೇವಾ ಪೂರ್ವ ಶಿಕ್ಷಕ ವಿಭಾಗಗಳನ್ನು ತಾತ್ಕಾಲಿಕವಾಗಿ ಮುಚ್ಚಲು.

| ಕ್ರ.ಸಂ | ಜಿಲ್ಲೆ | ಸಂಸ್ಥೆಯ ಹೆಸರು |
|---|---|---|
| 1 | ದಕ್ಷಿಣ ಕನ್ನಡ | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಂಗಳೂರು. |
| 2 | ಬೆಳಗಾವಿ | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಮಣ್ಣೂರು, ಬೆಳಗಾವಿ |
| 3 | ಮಂಡ್ಯ | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಂಡ್ಯ |
| 4 | ಧಾರವಾಡ | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ದಾರವಾಡ |
| 5 | ಬೆಂಗಳೂರು ನಗರ | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಆರ್.ಆರ್ ನಗರ, ಬೆಂಗಳೂರು. |
| 6 | ಬೆಂಗಳೂರು ಗ್ರಾಮಾಂತರ | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ರಾಜಾಜಿನಗರ, ಬೆಂಗಳೂರು |
| 7 | ತುಮಕೂರು | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ತುಮಕೂರು |
| 8 | ಬಾಗಲಕೋಟೆ | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಇಳಕಲ್. |

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 04 ಟಿಎಫ್‌ಪಿ 2018 ದಿನಾಂಕ:24.07.2018 ರನ್ವಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

27/09/18

(ಎಸ್.ಆರ್.ಎಸ್.ನಾಥನ್)
ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ(ಯೋಜನೆ)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, (ಅಡಿಟ್ 1 & 2) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ಬೆಂಗಳೂರು.
5. ನಿರ್ದೇಶಕರು(ಪ್ರಾಥಮಿಕ/ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
6. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು.
7. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8. ಉಪನಿರ್ದೇಶಕರು, ಖಜಾನಾ ಗಣಕ ಕೇಂದ್ರ, ನಂ.49, ಖನಿಜ ಭವನ, ರೇಸ್ಕೋರ್ಸ್ ರಸ್ತೆ, ಬೆಂಗಳೂರು.
9. ಸರ್ಕಾರದ ಉಪಕಾರ್ಯದರ್ಶಿ-2, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
10. ಕೋ ಆರ್ಡಿನೇಟರ್, ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ, ಬೆಂಗಳೂರು.
11. ಸಾಪ್ತಾಹಿಕ ರಾಜ್ಯ ಪತ್ರ/ಶಾಖಾರಕ್ಷ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ (ಪ್ರಾಥಮಿಕ & ಪ್ರೌಢ ಶಿಕ್ಷಣ) ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಆಪ್ತ ಸಹಾಯಕರು, ಶಿಕ್ಷಣ ಇಲಾಖೆ, ಬೆಂಗಳೂರು.

ಅನುಬಂಧ - ೫

| ಕ್ರ.ಸಂ | ಡಯಟ್‌ಗಳ ಹೆಸರು | ಉಪನ್ಯಾಸಕರ ಸಂಬಳ | ಬೋಧಕೇತರ | ಒಟ್ಟು |
|---|---|---|---|---|
| 1 | Bangalore Rural | 4390017 | 684976 | 5074993 |
| 2 | Bangalore Urban(S) | 1903692 | 851896 | 2755588 |
| 3 | Belgaum | 3282773 | 628200 | 3910973 |
| 4 | Bellary | 4474416 | 641388 | 5115804 |
| 5 | Bidar | 6983973 | 726723 | 7710696 |
| 6 | Bijapura | 2066700 | 1503828 | 3570528 |
| 7 | Chikkaballapura | 2850000 | 320000 | 3170000 |
| 8 | Chikkamagalore | 5083659 | 605321 | 5688980 |
| 9 | Chitradurga | 4378506 | 1500265 | 5878771 |
| 10 | Davanagere | 4654808 | 959099 | 5613907 |
| 11 | Dharawada | 3976464 | 314918 | 4291382 |
| 12 | Hassan | 2777388 | 929340 | 3706728 |
| 13 | Ilkal | 3378132 | 638964 | 4017096 |
| 14 | Kamalapura | 2619500 | 512000 | 3131500 |
| 15 | Kolara | 4716789 | 436043 | 5152832 |
| 16 | Koppala | 2561940 | 2125621 | 4687561 |
| 17 | Kudige | 5276500 | 655652 | 5932152 |
| 18 | Kumta | 2989203 | 378354 | 3367557 |
| 19 | Mandya | 3585960 | 316332 | 3902292 |
| ೨೦ | Mangalore | 7932853 | 624129 | 8556982 |
| ೨೧ | Mysore | 2975364 | 1112028 | 4087392 |
| ೨೨ | Ramanagara | 5816040 | 331092 | 6147132 |
| ೨೩ | Shimoga | 9432624 | 914256 | 10346880 |
| ೨೪ | Tumkur | 3770016 | 633085 | 4403101 |
| ೨೫ | Udupi | 1133481 | 0 | 1133481 |
| ೨೬ | Yadagiri | 3322275 | 274725 | 3597000 |
| ೨೭ | Yaramaras | 439044 | 420544 | 859588 |
| | **Total :** | 106772117 | 19038779 | 125810896 |

ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
100 ಅಡಿ ವರ್ತುಳ ರಸ್ತೆ, ಬನಶಂಕರಿ 3ನೇ ಹಂತ
ಬೆಂಗಳೂರು - 560 085

ಅನುಬಂಧ - 6

## ಡಯಟ್ ಉಪನ್ಯಾಸಕರ ಕರ್ತವ್ಯಗಳು:

- ಡಯಟ್‌ಗಳಲ್ಲಿ ಒಟ್ಟು: 07 ವಿಭಾಗಗಳಿವೆ.
- ಸೇವಾ ಪೂರ್ವ ಶಿಕ್ಷಕರ ಶಿಕ್ಷಣ ವಿಭಾಗ( ಪಿ.ಎಸ್.ಟಿ.ಇ)
- ಶೈಕ್ಷಣಿಕ ನಾಯಕತ್ವ ನಿರ್ವಹಣೆ ಮತ್ತು ಯೋಜನಾ ವಿಭಾಗ.
- ಮಾನವೀಯ ವಿಭಾಗ.
- ಶಿಕ್ಷಣ ಶಾಸ್ತ್ರ ವಿಭಾಗ.
- ಭಾಷಾ ವಿಭಾಗ.
- ವಿಜ್ಞಾನ,ಗಣಿತ ಮತ್ತು ಜೀವಶಾಸ್ತ್ರ ವಿಭಾಗ.
- ಜಿಲ್ಲಾ ನಿರ್ದಿಷ್ಟ ಅಗತ್ಯಗಳ ವಿಭಾಗ.

ಪಿ.ಎಸ್.ಟಿ.ಇ ವಿಭಾಗದ ನಿರ್ದಿಷ್ಟ ಕರ್ತವ್ಯಗಳು ಹಾಗೂ ಬೋಧನಾ ಕಾರ್ಯಗಳು :
ಡಯಟ್ ಹಂತದಲ್ಲಿ ಜಿಲ್ಲೆಗೆ ಬರುವ ಎಲ್ಲಾ ಸೇವಾ ನಿರತ ಶಿಕ್ಷಕರಿಗೆ ತರಬೇತಿಗಳು, ಡಿ.ಎಲ್.ಇಡಿ ಸಂಸ್ಥೆಗಳ ಮೇಲ್ವಿಚಾರಣೆ. ವೇಳಾಪಟ್ಟಿ ತಯಾರಿಸುವುದು. ಪರೀಕ್ಷೆ ನಡೆಸುವುದು. ಮೌಲ್ಯಮಾಪನ ಮಾಡುವುದು. ಕ್ಲಸ್ಟರ್ ಸಮಾಲೋಚನಾ ಸಭೆಗಳನ್ನು ನಡೆಸುವುದು. ಎನ್.ಐ.ಓ.ಎಸ್ ತರಗತಿ ಹಾಗೂ ಪರೀಕ್ಷೆಗಳನ್ನು ನಡೆಸುವುದು. ಹಾಗೂ ಶೈಕ್ಷಣಿಕ ಗುಣಮಟ್ಟವನ್ನು ಸುಧಾರಿಸಲು ಹಲವಾರು ತರಬೇತಿಗಳನ್ನು ನಡೆಸುವುದು. ಜಿಲ್ಲೆಯ ಎಲ್ಲಾ ಶಾಲೆಗಳಿಗೆ ಬೇಟಿ ನೀಡಿ ಅಗತ್ಯ ಮಾರ್ಗದರ್ಶನ ನೀಡುವುದು.

ಡಯಟ್ ಹಂತದಲ್ಲಿ ನಿರ್ವಹಿಸಲಾಗುತ್ತಿರುವ ವಿವಿಧ ಹಂತದ ತರಬೇತಿಗಳು :

- ಜಿಲ್ಲಾ ಮತ್ತು ತಾಲ್ಲೂಕು ಹಂತದಲ್ಲಿ ಗುರುಚೇತನ/ ಆಯ್ಕೆ ಆಧಾರಿತ ಸೇವಾ ನಿರತ ಶಿಕ್ಷಕರ ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮ ತರಬೇತಿಗೆ ಸಂಪನ್ಮೂಲ ವ್ಯಕ್ತಿಗಳ ಆಯ್ಕೆ ಪ್ರಕ್ರಿಯೆ.
- ಜಿಲ್ಲಾ ಮತ್ತು ತಾಲ್ಲೂಕು ಹಂತದಲ್ಲಿ ಗುರುಚೇತನ ತರಬೇತಿ ಆಯೋಜನೆ. ಹಾಗೂ ಓದು ಕರ್ನಾಟಕ ಕಲಿಕಾ ಆಂದೋಲನ ತರಬೇತಿ.
- ಜಿಲ್ಲಾ ಮತ್ತು ತಾಲ್ಲೂಕು ಹಂತದಲ್ಲಿ ಸೇವಾ ನಿರತ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರಿಗೆ ವಿಷಯವಾರು ತರಬೇತಿ ಹಾಗೂ ಮೇಲ್ವಿಚಾರಣೆ, ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯ ನಿರ್ವಹಿಸುವುದು
- ತಾಲ್ಲೂಕು ಮತ್ತು ಜಿಲ್ಲಾ ಜಿಲ್ಲೆಯ ಎಸ್.ಡಿ.ಎಂ.ಸಿ ತರಬೇತಿಗಳು.
- ದೈಹಿಕ ಶಿಕ್ಷಣ/ಚಿತ್ರಕಲೆ/ವಿಶೇಷ ಶಿಕ್ಷಕರಿಗೆ ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ತರಬೇತಿ.
- ಜಿಲ್ಲೆಯ ಡಿ.ಎಲ್.ಇಡಿ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಉಪನ್ಯಾಸಕರುಗಳಿಗೆ ಶೈಕ್ಷಣಿಕ ಕ್ಲಸ್ಟರ್ ಸಮಾಲೋಚನಾ ತರಬೇತಿಗಳು
- ಪ್ರಾಥಮಿಕ/ ಪ್ರೌಢ ಶಾಲಾ / ಪದವಿ ಪೂರ್ವ ಕಾಲೇಜುಗಳ ಮುಖ್ಯ ಶಿಕ್ಷಕರಿಗೆ ಶಾಲಾ ನಾಯಕತ್ವ ನಿರ್ವಹಣೆ ಮತ್ತು ಯೋಜನೆ ತರಬೇತಿ.
- ಮಾಹಿತಿ ಸಿಂಧು. ಐ.ಸಿ.ಟಿ ಫೇಸ್-1,2,3 ಪ್ರೌಢ ಶಾಲಾ ಶಿಕ್ಷಕರಿಗೆ ಟ್ಯಾಲ್ಪ್ ತರಬೇತಿ( ತಂತ್ರಜ್ಞಾನ ಸಹಾಯದಿಂದ ಕಲಿಕಾ ತರಬೇತಿ.
- ಶೈಕ್ಷಣಿಕ ವೃತ್ತಿ ಮಾರ್ಗದರ್ಶನ ಮತ್ತು ಆಪ್ತ ಸಲಹಾ ಕೇಂದ್ರಗಳ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ.
- ಕ್ಲಸ್ಟರ್/ ತಾಲ್ಲೂಕ/ಜಿಲ್ಲಾ ಹಂತದಲ್ಲಿ ಪ್ರೇರಣಾ ಹಾಗೂ ಬುನಾದಿ ತರಬೇತಿಗಳ ನಿರ್ವಹಣೆ ಹಾಗೂ ಮೇಲ್ವಿಚಾರಣೆ.
- ಜಿಲ್ಲಾ ಹಂತದಲ್ಲಿ ಶಾಲಾ ಸಿದ್ಧಿ ತರಬೇತಿಯ ನಿರ್ವಹಣೆ ಹಾಗೂ ಮೇಲ್ವಿಚಾರಣೆ
- 30 ದಿನಗಳ ಆಂಗ್ಲ ಭಾಷೆ ಸಬಲೀಕರಣ ತರಬೇತಿ.
- ಜಿಲ್ಲಾ ಹಂತದಲ್ಲಿ ತರಬೇತಿ ಸಂಪನ್ಮೂಲಗಳ ಭಾಗವಹಿಸುವಿಕೆ

ಭೇಟಿಗಳು:

- ಶಾಲೆ ಮತ್ತು ಡಿ.ಎಲ್.ಇಡಿ ಸಂಸ್ಥೆಗಳಿಗೆ ಭೇಟಿ ಮತ್ತು ತಪಾಸಣೆ.
- ಜಿಲ್ಲೆಯ ಪ್ರೌಢ ಶಾಲೆಗಳಿಗೆ ಹಾಗೂ ಡಿ.ಎಲ್.ಇಡಿ ಸಂಸ್ಥೆಗಳಿಗೆ ಪಿ.ಪಿ.ಇ ಮೌಲ್ಯಮಾಪನ ಸಮಿತಿಯ ಸದಸ್ಯರಾಗಿ ಭೇಟಿ
- ಜಿಲ್ಲೆಯ ಡಿ.ಎಲ್.ಇಡಿ ಮತ್ತು ಡಿ.ಪಿ.ಇಡಿ ಕಾಲೇಜುಗಳಿಗೆ ಆಂತರಿಕ ಅಂಕಗಳ ಪರಾಮರ್ಶೆಗೆ ಸಮನ್ವಯ ಸಮಿತಿಗಳ ಭೇಟಿ
- ಬ್ಲಾಕ್‌ನ ನೋಡಲ್ ಅಧಿಕಾರಿಗಳು ತಾಲ್ಲೂಕಿನ ಶಾಲೆಗಳಿಗೆ ಭೇಟಿ ನೀಡಿ ಮಕ್ಕಳ ಕಲಿಕೆ/ಕಲಿಕಾ ಪ್ರಕ್ರಿಯೆ ಹಾಗೂ ಶಿಕ್ಷಕರ ಬೋಧನಾ ಕಾರ್ಯ ವೀಕ್ಷಣೆ ಮಾಡಿ ಮಾರ್ಗದರ್ಶನ.
- ತರಬೇತಿಯ ತರಗತಿ ಅನುಷ್ಠಾನ ಕುರಿತು ಹಿಮ್ಮಾಹಿತಿ ಪಡೆಯಲು ಶಾಲಾ ಭೇಟಿ
- ತಾಲ್ಲೂಕಿನ ಬಿ.ಆರ್.ಸಿ/ಸಿ.ಆರ್.ಸಿ ಕೇಂದ್ರಗಳಿಗೆ ಭೇಟಿ ನೀಡಿ ಮಾರ್ಗದರ್ಶನ
- ಸರ್ಕಾರ/ ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನ ಕುರಿತಂತೆ ತಾಲ್ಲೂಕು ಹಂತದಲ್ಲಿ ಮೇಲ್ವಿಚಾರಣೆ
- ಜಿಲ್ಲಾ ಹಂತದಲ್ಲಿ ಟೆಲಿಕಾನ್ಫರೆನ್ಸ್/ವಿಡಿಯೋ ಕಾನ್ಫರೆನ್ಸ್ ಆಯೋಜನೆ ಮತ್ತು ಮೇಲ್ವಿಚಾರಣೆ.
- 10ನೇ ತರಗತಿ ಪರೀಕ್ಷೆಗಳಲ್ಲಿ ಕಡಿಮೆ ಫಲಿತಾಂಶ ಪಡೆದಿರುವ ಪ್ರೌಢ ಶಾಲೆಗಳಿಗೆ ಉಸ್ತುವಾರಿ ಅಧಿಕಾರಿಯಾಗಿ ಭೇಟಿ ಮತ್ತು ಶಿಕ್ಷಕರಿಗೆ/ವಿದ್ಯಾರ್ಥಿಗಳಿಗೆ ಮಾರ್ಗದರ್ಶನ.

ಡಯಟ್‌ಗಳಲ್ಲಿ ನಡೆಯುವ ಪರೀಕ್ಷೆಗಳು:

- ಡಿ.ಎಲ್.ಇಡಿ, ಡಿ.ಪಿ.ಇಡಿ ಪರೀಕ್ಷೆಗಳ ನಿರ್ವಹಣೆ ಮತ್ತು ಮೇಲ್ವಿಚಾರಣೆ,
- ಡಿ.ಎಲ್.ಇಡಿ, ಡಿ.ಪಿ.ಇಡಿ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ.
- ಕೆ.ಪಿ.ಎಸ್.ಸಿ ಇಲಾಖಾ ಪರೀಕ್ಷೆಗಳು,
- ವಾಣಿಜ್ಯ ಪರೀಕ್ಷೆಗಳು.
- ಕಂಪ್ಯೂಟರ್ ಪರೀಕ್ಷೆಗಳು.
- ಚಿತ್ರಕಲೆ, ನೃತ್ಯ/ನಾಟಕ ಸಂಗೀತ ಪರೀಕ್ಷೆಗಳು
- ಎನ್.ಟಿ.ಎಸ್.ಇ/ಎನ್.ಎಂ.ಎಂ.ಎಸ್ ಪರೀಕ್ಷೆಗಳ ಮೇಲ್ವಿಚಾರಣೆ
- ಸಿ.ಆರ್.ಪಿ/ಬಿ.ಆರ್.ಪಿ/ಇ.ಸಿ.ಓ ಆಯ್ಕೆ ಸ್ಪರ್ಧಾತ್ಮಕ ಪರೀಕ್ಷೆಗಳು
- ಗ್ರೂಪ್-ಬಿ ನಿರ್ದಿಷ್ಟ ಯೋಜನೆಯ ಹುದ್ದೆಗಳಿಗೆ ಆಯ್ಕೆ ಪರೀಕ್ಷೆ
- ಎಸ್.ಎಸ್.ಎಲ್.ಸಿ ಪರೀಕ್ಷೆಗಳ ಜಾಗೃತ ದಳದ ಸದಸ್ಯರಾಗಿ ಕಾರ್ಯ ನಿರ್ವಹಣೆ
- ಟಿ.ಇ.ಟಿ ಪರೀಕ್ಷೆಗಳ ಜಾಗೃತ ದಳದ ಸದಸ್ಯರಾಗಿ ಕಾರ್ಯ ನಿರ್ವಹಣೆ
- ಆದರ್ಶ ಮತ್ತು ವಸತಿ ಶಾಲೆಗಳ ಪ್ರವೇಶ ಪರೀಕ್ಷೆಗಳ ಮೇಲ್ವಿಚಾರಣೆ ಕಾರ್ಯ
- ಕೆ.ಎಸ್.ಕ್ಯೂ.ಎ.ಎ.ಸಿ ಪರೀಕ್ಷೆಯ ನಿರ್ವಹಣೆ
- ಎನ್.ಎ.ಎಸ್ ಪರೀಕ್ಷಾ ಮೇಲ್ವಿಚಾರಣೆ.
- ಸಿ.ಎಸ್.ಎ.ಎಸ್ ಪರೀಕ್ಷಾ ಮೇಲ್ವಿಚಾರಣೆ

ಯೋಜನೆಗಳ ತಯಾರಿಕೆ

- ಟಿ.ಇ ವಾರ್ಷಿಕ ಕಾರ್ಯಕ್ರಮಗಳ ಯೋಜನೆ ತಯಾರಿಕೆ
- ಸಮಗ್ರ ಶಿಕ್ಷಣ ವಾರ್ಷಿಕ ತರಬೇತಿ ಯೋಜನೆ ತಯಾರಿಕೆ.
- ಡಿ.ಎಲ್.ಇಡಿ ಕಾಲೇಜುಗಳ ವಾರ್ಷಿಕ ಯೋಜನೆ ತಯಾರಿಕೆ

ದಾಖಲಾತಿ ಕಾರ್ಯ

- ಡಿ.ಎಲ್.ಇಡಿ /ಡಿ.ಪಿ.ಇಡಿ ಆನ್‌ಲೈನ್ ದಾಖಲಾತಿ ನೋಡಲ್ ಕೇಂದ್ರ ಕಾರ್ಯ
- [illegible]

- ಕಾರ್ಯಕ್ರಮಗಳು :
  - ತಾಲ್ಲೂಕು ಹಂತದ ವಿಜ್ಞಾನ ಮತ್ತು ವಸ್ತು ಪ್ರದರ್ಶನ ಕಾರ್ಯಕ್ರಮದ ಮೇಲ್ವಿಚಾರಣೆ.
  - ಜಿಲ್ಲಾ ಹಂತದಲ್ಲಿ ವಿಜ್ಞಾನ ವಸ್ತುಪ್ರದರ್ಶನ ಕಾರ್ಯಕ್ರಮ ಮೇಲ್ವಿಚಾರಣೆ.
  - ತಾಲ್ಲೂಕು ಮತ್ತು ಜಿಲ್ಲಾ ಹಂತದ ವಿಜ್ಞಾನ ವಿಚಾರಗೋಷ್ಠಿ ಮೇಲ್ವಿಚಾರಣೆ ಮತ್ತು ಆಯೋಜನೆ.
  - ತಾಲ್ಲೂಕು ಮತ್ತು ಜಿಲ್ಲಾ ಹಂತದ ವಿಜ್ಞಾನ ನಾಟಕ ಸ್ಪರ್ಧೆ ಮೇಲ್ವಿಚಾರಣೆ ಮತ್ತು ಆಯೋಜನೆ.
  - ತಾಲ್ಲೂಕು ಮತ್ತು ಜಿಲ್ಲಾ ಹಂತದ ಎಸ್.ಪಿ.ಇ.ಪಿ ಸ್ಪರ್ಧೆಗಳ ಮೇಲ್ವಿಚಾರಣೆ.
  - ಇನ್ಸ್ಪೈರ್ ಅವಾರ್ಡ್‌ನ ತಾಲ್ಲೂಕು ನೋಡಲ್ ಅಧಿಕಾರಿಗಳಿಗೆ ತರಬೇತಿ ಮತ್ತು ನೊಂದಣಿಯ ಮೇಲ್ವಿಚಾರಣೆ ಹಾಗೂ ಅನುಮೋದನೆ ಕಾರ್ಯದ ನಿರ್ವಹಣೆ.
  - ಅಟಲ್ ಟಿಂಕರಿಂಗ್ ಲ್ಯಾಬ್‌ನ ಹೊಸ ಅರ್ಜಿ ಸಲ್ಲಿಸುವ ಕುರಿತಂತೆ ತರಬೇತಿ ಹಾಗೂ ತಾಲ್ಲೂಕು ಹಂತದಲ್ಲಿ ಮೇಲ್ವಿಚಾರಣೆ.
  - ರೇಡಿಯೋ, ಎಜುಸ್ಯಾಟ್, ದೂರದರ್ಶನ ಕಾರ್ಯಕ್ರಮಗಳ ಮೇಲ್ವಿಚಾರಣೆ.
  - ಕರ್ನಾಟಕ ಪಬ್ಲಿಕ್ ಶಾಲೆಗಳ ಮೇಲ್ವಿಚಾರಣೆ.

ಸಂಶೋಧನಾ / ಅಧ್ಯಯನ ಕಾರ್ಯ :

- ಜಿಲ್ಲಾ ಹಂತದಲ್ಲಿ ಸಂಶೋಧನೆ/ ಅಧ್ಯಯನ ಕಾರ್ಯ
- ಕಿರು ಅಧ್ಯಯನಗಳು.
- ಕೆ.ಎಸ್.ಕ್ಯು.ಎ.ಎ.ಸಿ ಮೌಲ್ಯಾಂಕನ ವಿಶ್ಲೇಷಣಾ ಕಾರ್ಯ.
- ಎಸ್.ಸಿ.ಪಿ.ಸಿ.ಆರ್. ಸರ್ವೆ ಕಾರ್ಯ.

ಪಠ್ಯ ಪುಸ್ತಕಗಳ ಪರಿಷ್ಕರಣೆ ಕಾರ್ಯ/ ತರಬೇತಿ ಸಾಹಿತ್ಯ ರಚನೆ ಕಾರ್ಯ :

- 6, 7, 9 ಮತ್ತು 10ನೇ ತರಗತಿಯ ಗಣಿತ ವಿಜ್ಞಾನ ಎನ್.ಸಿ.ಇ.ಆರ್.ಟಿ ಆಧಾರಿತ ಪಠ್ಯ ಪುಸ್ತಕಗಳ ರಚನಾ ಕಾರ್ಯ ಹಾಗೂ ವಿಶ್ಲೇಷಣೆ.
- ಇ–ಸಂಪನ್ಮೂಲಗಳ ತಯಾರಿಕೆ.

ರಾಜ್ಯ ಮತುತ ರಾಷ್ಟ್ರ ಹಂತದ ಕಾರ್ಯಕ್ರಮಗಳಲ್ಲಿ ಜಿಲ್ಲಾ ಪ್ರತಿನಿಧಿಯಾಗಿ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸುವಿಕೆ :

- ಸಮಕಾಲೀನ ಶಿಕ್ಷಣ ದೃಷ್ಟಿಕೋನಗಳು ಮತ್ತು ಸಂಶೋಧನ ಅಧ್ಯಯನ ವಿಷಯದಲ್ಲಿ ಸ್ನಾತಕೋತ್ತರ ಸರ್ಟಿಫಿಕೇಟ್ ವ್ಯಾಸಂಗ.
- ನ್ಯೂಪ ನವದೆಹಲಿ ಇಲ್ಲಿ ನಡೆದ ವಿವಿಧ ವಿಚಾರಗೋಷ್ಠಿ ಹಾಗೂ ಸಭೆಗಳಲ್ಲಿ ಭಾಗವಹಿಸುವಿಕೆ (ಎಸ್.ಪಿ.ಇ.ಪಿ/ಸಿ.ಸಿ.ಇ/ಮಾದಕ ವಸ್ತು ಬಳಕೆ ನಿಯಂತ್ರಣ/ ಸಂಶೋಧನಾ ತಂತ್ರ ಮತ್ತು ವಿಧಾನಗಳು)
- ರಾಜ್ಯ ಮಟ್ಟದ ವಿವಿಧ ತರಬೇತಿ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುವಿಕೆ.
- ರಾಜ್ಯ ಚುನಾವಣಾ ಆಯೋಗದಿಂದ ನಡೆಸಲಾಗುತ್ತಿರುವ ಯುವ ಮತದಾರರ ವಿವಿಧ ಸ್ಪರ್ಧೆಗಳ ನೋಡಲ್ ಅಧಿಕಾರಿಗಳ ಕಾರ್ಯ.
- ಸಿ.ಸಿ.ಆರ್.ಟಿ ತರಬೇತಿಯಲ್ಲಿ ಭಾಗವಹಿಸುವಿಕೆ.
- ಹೊಸ ಶಿಕ್ಷಕರ ಬುನಾದಿ ತರಬೇತಿ ಸಂಬಂಧ ರಾಜ್ಯ ಮಟ್ಟದ ಕಾರ್ಯಕ್ರಮದಲ್ಲಿ ಭಾಗವಹಿಸುವಿಕೆ.
- ತರಬೇತಿ ಸಾಹಿತ್ಯ ವಿನ್ಯಾಸದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುವಿಕೆ/ಮೇಲ್ವಿಚಾರಣೆಗಳು/ ಇಲಾಖೆ/ ಸರ್ಕಾರ ಕಾಲಕಾಲಕ್ಕೆ ಸೂಚಿಸುವ ಕಾರ್ಯಕ್ರಮಗಳನ್ನು ನಿರ್ವಹಿಸಲಾಗುತ್ತಿದೆ.